ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ

೫೫. ಶ್ರೀ ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಕೈಗಾರಿಕಾ, ಇಂಧನ ಹಾಗೂ ಪಕ್ಷ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರವು ಯಾವ ಉದ್ದೇಶಗಳಿಗಾಗಿ ರಾಜ್ಯ ನಾರು ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ.

ಆ) ಮೇಲ್ಕಂಡ ನಿಗಮದಲ್ಲಿ ಸರ್ಕಾರ ಹೂಡಿರುವ ಬಂಡವಾಳವೆಷ್ಟು.

ಇ) ಮೇಲ್ಕಂಡ ನಿಗಮದಲ್ಲಿ ಸಿಬ್ಬಂದಿ ಹಾಗೂ ಆಡಳಿತ ನಿರ್ವಹಣೆಗೆ ಬೇಕಾಗಿರುವ ವಾರ್ಷಿಕ ವೊತ್ತವೆಷ್ಟು.

ಈ) ಮೇಲ್ಕಂಡ ನಿಗಮವು ರಾಜ್ಯದ ಸಣ್ಣ ಕೈಗಾರಿಕಾ ನಾರು ಉತ್ಪಾದನಾ ಘಟಕಗಳ ರಕ್ಷಣೆಗಾಗಿ ಕೈಗೊಂಡ ಕ್ರಮವೇನು ?

ಶ್ರೀಎಸ್. ಎಂ. ಯಾಹ್ಯಾ (ಕೈಗಾರಿಕಾ, ಇಂಧನ ಹಾಗೂ ಪಕ್ಷ್ಯ ಸಚಿವರು).—

ಅ) ರಾಜ್ಯದಲ್ಲಿ ತೆಂಗಿನ ನಾರು ಮತ್ತು ನಾರಿಗೆ ಸಂಬಂಧಿಸಿದ ಉದ್ಯಮಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸ್ಥಾಪಿಸಲಾಗಿದೆ.

ಆ) ಸರ್ಕಾರವು ೧೯೮೪-೮೫ರ ವರೆಗೆ ೭೦.೦೦ ಲಕ್ಷ ರೂ. ಗಳ ಬಂಡವಾಳವನ್ನು ನಿಗಮದ ತೊಡಗಿಸಿದೆ.

ಇ) ರೂ. ೧೫.೦೩ ಲಕ್ಷ ರೂ. ಗಳು.

ಈ) ಹಾಲೀ ಇರುವ ಘಟಕಗಳು ಉತ್ಪಾದಿಸುತ್ತಿರುವ ತೆಂಗಿನ ನಾರು, ಸುರುಳಿ ನಾರು ಹಾಗೂ ಇತರೆ ಉತ್ಪನ್ನಗಳಿಗೆ ಮಾರಾಟ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಹಾಗೂ ನಿಗಮವು ನಾರು ಕುಶಲ ಕರ್ಮಿಗಳಿಗೆ ತರಭೇತಿಯನ್ನು ನೀಡುತ್ತಿದೆ ಅಲ್ಲದೆ, ನಾರು ಕುಶಲ ಕರ್ಮಿಗಳಿಗೆ ತಮ್ಮದೆ ಆದ ಘಟಕವನ್ನು ತೆರೆಯಲು ಪ್ರೋತ್ಸಾಹ ನೀಡಲಾಗುತ್ತಿದೆ.

ಸಾರಾಯಿ ಮಾರಾಟ

೬೨೨ ಬಿ. ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬ರಿಂದ ೧೯೮೮ರ ಅವಧಿಯಲ್ಲಿ ಬೆಂಗಳೂರು ನಗರದ ಸಾರಾಯಿ ಮತ್ತು ಹೆಂಡದ ಮಾರಾಟದ ಹಕ್ಕನ್ನು ಪಡೆದಿದ್ದವರ ಹೆಸರುಗಳೇನು.

ಆ) ಈ ಅವಧಿಯಲ್ಲಿ ಯಾವ ಯಾವ ವರ್ಷಗಳಲ್ಲಿ ಹೆಂಡ ಮತ್ತು ಸಾರಾಯಿ ಮಾರಾಟದ ಹಕ್ಕನ್ನು ಮರು ಹರಾಜು ಮಾಡಲಾಗಿದೆಯೇ ? ಇದಕ್ಕೆ ಕಾರಣಗಳೇನು ?

ಇ) ಈ ಅವಧಿಯಲ್ಲಿ ಕೆಲವರು ಸುಸ್ತಿದಾರರಾಗಿದ್ದರೂ ಸಹ ಹರಾಜಿನಲ್ಲಿ ಭಾಗವಹಿಸಿರುವುದು ನಿಜವೇ ?

ಈ) ಸುಸ್ತಿದಾರರಾಗಿರುವವರು ಹರಾಜಿನಲ್ಲಿ ಭಾಗವಹಿಸಕೂಡದೆಂಬ ನಿಬಂಧನೆ ಕಾನೂನಿನಲ್ಲಿ ಇದೆಯೇ ? ಆ ರೀತಿ ನಿಬಂಧನೆವಿದ್ದರೂ ಸಹ ಹರಾಜಿನಲ್ಲಿ ಭಾಗವಹಿಸಿರುವುದು ನಿಜವೇ ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು).—

ಅ) ಮಂಡ

೧೯೮೬-೮೭ ಮೆ. ಹೆಚ್. ದಾಸಪ್ಪ ಮತ್ತು ಮಕ್ಕಳು
೧೯೮೭-೮೮ ಮೆ. ಹೆಚ್. ದಾಸಪ್ಪ ಮತ್ತು ಮಕ್ಕಳು, (೨) ಕೆ. ಶಿವಣ್ಣ.

ಸಾರಾಯಿ

೧೯೮೬-೮೭ ಶ್ರೀ ಹೆಚ್.ಇ. ಪಾಂಡುರಂಗ.
೧೯೮೭-೮೮ ಮೆ. ರಂಗನಾಥ ಅಸೋಸಿಯೇಟ್ಸ್.

ಆ) ಹೆಂಡದ ಗುತ್ತಿಗೆ ಹಕ್ಕನ್ನು ೧೯೮೬-೮೭ ಮತ್ತು ೧೯೮೭-೮೮ನೇ ಇಸವಿಗಳಲ್ಲಿ ನ್ಯಾಯಾಲಯದ ಆಜ್ಞೆಯ ಮೇರೆಗೆ ಮರು ಹರಾಜು ಮಾಡಲಾಗಿದೆ. ಮೇಲೆ ನಮೂದಿಸಿರುವ ವರ್ಷಗಳಲ್ಲಿ ಸಾರಾಯಿಯ ಮರು ಹರಾಜನ್ನು ಮಾಡುವುದಿಲ್ಲ.

ಇ) ಹೌದು.

ಈ) ಹೌದು. ಸ್ಪರ್ಧಾತ್ಮಕ ಸವಾಲುಗಳನ್ನು ಏರ್ಪಡಿಸುವ ಮತ್ತು ಸರ್ಕಾರದ ಆದಾಯದ ದೃಷ್ಟಿಯಿಂದ.

ಅಬಕಾರಿ ಆದಾಯದ ಬಗ್ಗೆ

೬೬೨-ಎ. ಶ್ರೀ ಸಿ. ಬೈರೇಗೌಡ (ಕೋಲಾರ ಮಂಗಲ್).—ಮಾನ್ಯ ಆರ್ಥಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬ ಅಬಕಾರಿ ವರ್ಷದಿಂದ ೧೯೮೮ ಅಬಕಾರಿ ವರ್ಷದ ವರೆವಿಗೂ ಪ್ರತಿ ವರ್ಷ ಬಂದ ಅಬಕಾರಿ ವರಮಾನವೆಷ್ಟು ?

ಆ) ಪ್ರತಿ ವರ್ಷ ಈ ಆದಾಯದ ಶೇ. ಎಷ್ಟು ಹೆಚ್ಚಿಗೆ ಆಗಿದೆ.

ಇ) ಈ ನಿರೀಕ್ಷೆ ಪ್ರಕಾರ ಹೆಚ್ಚಿಗೆ ಆದಾಯ ಬಂದಿದೆಯೆ ?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮಂತ್ರಿಗಳು).—

ಅ) ೧) ೧೯೮೬-೮೭ : ೨೩೯.೯೬ ಕೋಟಿ ರೂಪಾಯಿಗಳು.
೨) ೧೯೮೭-೮೮ : ೨೬೨.೨೨ ಕೋಟಿ ರೂಪಾಯಿಗಳು.
೩) ೧೯೮೮-೮೯ : ೨೬೮.೯೪ ಕೋಟಿ ರೂಪಾಯಿಗಳು.

ಆ) ೧) ೧೯೮೬-೮೭ : ೨೫.೭೩ ಶೇ.
೨) ೧೯೮೭-೮೮ : ೯.೨೭ ಶೇ.
೩) ೧೯೮೮-೮೯ : ೨.೫೬ ಶೇ.

ಇ) ಹೌದು, ಅಲ್ಪಸ್ವಲ್ಪ ವ್ಯತ್ಯಾಸವಿದೆ.

ಶಿಕಾರಿಪುರ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆ ಬಗ್ಗೆ

೨೧೯. ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿಗೆ ಅಂಗನವಾಡಿ ಕಾರ್ಯಕ್ರಮದ ಅನ್ವಯ ಯೋಜನೆಯನ್ನು ಈ ವರ್ಷ ಪ್ರಾರಂಭ ಮಾಡುವ ಬಗ್ಗೆ ಸರ್ಕಾರ ಯೋಚನೆ ಮಾಡಿದೆಯೇ ?

ಆ) ಕಳೆದ ೬-೭ ವರ್ಷಗಳಿಂದಲೂ ಬೇಡಿಕೆ ಇದ್ದು ಈ ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹರಿಜನ-ಗಿರಿಜನರು ವಾಸವಾಗಿದ್ದರೂ ಈ ಯೋಜನೆಯನ್ನು ಅಳವಡಿಸದಿರಲು ಕಾರಣಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ರಾಜ್ಯದ ಐಸಿಡಿಎಸ್ ಅನಾವೃತ ತಾಲ್ಲೂಕುಗಳ ಹಿನ್ನೆಲೆ ವಿವರಗಳೊಂದಿಗೆ ಶಿಕಾರಿಪುರ ತಾಲ್ಲೂಕನ್ನು ಸೇರಿಸಿ ಯೋಜನೆ ಮಂಜೂರಾತಿಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು.

ಆ) ಹಿಂದಿನ ವರ್ಷಗಳಲ್ಲಿ ಎಲ್ಲಾ ಅನಾವೃತ ತಾಲ್ಲೂಕುಗಳೊಂದಿಗೆ ಶಿಕಾರಿಪುರ ತಾಲ್ಲೂಕನ್ನು ಸೇರಿಸಿ ಯೋಜನೆ ಮಂಜೂರಾತಿಗೆ ಪ್ರಸ್ತಾವನೆಯನ್ನು ಕೇಂದ್ರಸರ್ಕಾರಕ್ಕೆ ಸಲ್ಲಿಸಲಾಗಿತ್ತು, ಆದರೆ ಕೇಂದ್ರ ಸರ್ಕಾರವು ಶಿಕಾರಿಪುರ ತಾಲ್ಲೂಕನ್ನು ಐಸಿಡಿಎಸ್ ಯೋಜನೆಗೆ ಇದುವರೆವಿಗೂ ಪರಿಗಣಿಸಿರುವುದಿಲ್ಲ.